ಶ್ರೀ ಜಿ. ಮಾವೇಗೌಡ.—ಕಾನೂನು ಪ್ರಕಾರ ಸಬ್ ಲೀಸ್ ಕೊಡುವುದಕ್ಕೆ ಅವಕಾಶವಿದೆ. ಸಬ್ ಲೀಸ್ ಕೊಟ್ಟಿದ್ದರೆ ಕ್ಯಾನ್ಸಲ್ ಮಾಡುವುದಕ್ಕೆ ನನಗೆ ಅಧಿಕಾರವಿದೆ. ಆ ತರಹ ಯಾವುದಾದರೂ ಸಬ್ ಲೀಸ್ ಕೊಟ್ಟಿದ್ದರೆ ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎಸ್.ಎಫ್. ಭೈರಿ —ಕಾನೂನಿನಲ್ಲಿ ಅವಕಾಶವಿದೆ, ಅಲ್ಲಿ ಸಬ್‌ಲೀಸ್ ಮಾಡಿಕೊಂಡು ಡೆಟ್ ರೆಂಟ್ ವಸೂಲಿ ಮಾಡಲಿಕ್ಕೆ ಶುರು ಮಾಡಿದ್ದಾರೆ. ಡೆಟ್ ರೆಂಟ್ ಏಂದರೆ ೧ ಎಕರೆಗೆ ೫ ರೂಪಾಯಿ ಯಂತೆ ೫ ವರ್ಷಗಳಿಂದ ೧೦ ವರ್ಷಗಳವರೆಗೆ ೧೦ ತೆಗೆದುಕೊಳ್ಳುತ್ತಾರೆ, ೧೦ ವರ್ಷಗಳಿಂದ ೧೫ ವರ್ಷಗಳವರೆಗೆ ಕ್ವಾರೀ ರೇಟ್ ಎಷ್ಟು ತೆಗೆದುಕೊಳ್ಳುತ್ತೀರಿ ? ಅವರ ಮಾಹಿತಿ ಇದ್ದರೆ ತಿಳಿಸುತ್ತೀರಾ ?

ಶ್ರೀ ಜಿ. ಮಾವೇಗೌಡ.—ಅಧ್ಯಕ್ಷರೇ ಪ್ರಶ್ನೆ ಮತ್ತು ಭಾಷೆ ನನಗೆ ಅರ್ಥವಾಗಲಿಲ್ಲ.

ಅಧ್ಯಕ್ಷರು.—ಗುಲ್ಬರ್ಗಾದಿಂದ ಮುಂಡ್ಕೂರವರೆಗೆ ಭಾಷೆ ಹುಡುಬರುವಾಗ ಸ್ವಲ ಕಷ್ಟ. ಮಾನ್ಯ ಸದಸ್ಯರಾದ ಕಕ್ಕಿಲಾಯರವರೇ ತಾವೇ ಪ್ರಶ್ನೆ ಕೇಳಿರಿ.

ಶ್ರೀ ಬಿ.ವಿ ಕಕ್ಕಿಲಾಯ.—ಕ್ವಾರೀಯನ್ನು ದೊಡ್ಡ ಕಂದಾಯಗಳಿಗೆ ೧ ರೂಪಾಯಿ, ಚಾವಣಿಗೆ ರೂಪಾಯಿ ೨ ರೂಪಾಯಿ ೩ ರೂಪಾಯಿಗಳಿಗೆ ಕೊಡುತ್ತೇವೆಂದು ತಾವೇ ಹೇಳಿದ್ದೀರಿ. ಅವರಲ್ಲಿ ಒಂದು ಕಂಪನಿಗೆ ಕಡಿಮೆ ರೇಟಿನಲ್ಲಿ ಕೊಡುತ್ತಿದ್ದೀರಿ ಅವರು ಸಣ್ಣ ಸಣ್ಣವರಿಗೆ ಕಲ್ಲು ಹೊಡೆಯಲಿಕ್ಕೆ ಲೀಸ್ ಕೊಡುತ್ತಿದ್ದಾರೆ ಮತ್ತು ಅವರಿಂದ ಜಾಸ್ತಿ ರೇಟ್ ವಸೂಲಿ ಮಾಡುತ್ತಿದ್ದಾರೆ. ಸರ್ಕಾರದಿಂದಲೂ ಅವರಿಗೆ ಕಡಿಮೆ ರೇಟಿನಲ್ಲಿ ಕೊಟ್ಟಿದ್ದೀರಿ ಇದು ಸರಿಯಾದುದೇ ? ಅದರ ಬಗ್ಗೆ ಪರಿಶೀಲನೆ ಮಾಡುತ್ತೀರಾ ಎನ್ನುವುದು ಅವರ ಪ್ರಶ್ನೆ ?

ಶ್ರೀ ಜಿ. ಮಾವೇಗೌಡ. —ವಿವರಗಳನ್ನು ತರಿಸಿಕೊಂಡು ಎಕ್ಸಾಮಿನ್ ಮಾಡುತ್ತೇನೆ.

Starting of Arms and Ammunition factory at Bijapur

82 SRI S.S. ARAKERI (Bidloli)—Will the Minister for Finance and Tourism be pleased to state :—

(a) whether Government is proposing to start Arms and Ammunition Factory at Bijapur with the help of Defence Ministry, Government of India ;

(b) if so, the stage of the proposal ;

(c) whether the State Government is going to persue the Government of India to start this factory at Bijapur ;

(d) whether State Government is pressing the Government of India for H.M.T. Unit or B.E.L. or I.T.I. Unit at Bijapur which is long left demand to solve unemployment ;

(e) whether it has come to the notice of the Government that Bijapur District is industrially backward area ?

SRI M. VEERAPPA MOILY (Minister for Finance and Tourism)—

(a) No such proposal is before the Government at present.

(b) & (c) Does not arise in view of the reply to (a)

(d) Whenever Government comes to know of expansion/new proposals of Central Public Sector Undertakings, the State Government makes efforts to secure those projects to backward areas of the State.

(e) Yes.

ಶ್ರೀ ಎಸ್. ಎಸ್. ಅರಕೇರಿ.—ಶಸ್ತ್ರಾಸ್ತ್ರ ಹಾಗೂ ಯುದ್ಧ ಸಾಮಗ್ರಿ ಕಾರ್ಖಾನೆ ತೆಗೆಯುವ ಸಲುವಾಗಿ ೪೦೦ ಎಕರೆ ಭೂಮಿಯನ್ನು ಸರ್ವೆಮಾಡಿ ಗುಲ್ಬರ್ಗಾಕ್ಕಿಂತ ಬಿಜಾಪುರ ನ್ಯಾಯವಾದ ಮತ್ತು ಒಳ್ಳೆಯ ಜಾಗವೆಂದು ತಿಳಿದುಕೊಂಡು ತೀರ್ಮಾನ ಮಾಡಿದ್ದಾರೆ. ಈಗ ನಾಸಿಕ್‌ಗೆ ಶಿಫ್ಟ್ ಮಾಡಲು ಕಾರಣವೇನು ? ಅದರ ಬಗ್ಗೆ ಸರ್ಕಾರ ಏತಕ್ಕೆ ಕ್ರಮ ತೆಗೆದುಕೊಳ್ಳಲಿಲ್ಲ ?

ಶ್ರೀ ಎಂ. ವೀರಪ್ಪ ಮೊಯಿಲಿ.—Manufacture of Arms and Ammunition—ಇದಕ್ಕೆ ಲೈಸನ್ಸ್ ಕೊಡುವಂತಹ ಹಕ್ಕು ಕೇಂದ್ರ ಸರ್ಕಾರಕ್ಕೆ ಇದೆ. ಖಾಸಗೀ ಕ್ಷೇತ್ರದಲ್ಲಿ ಇಂತಹ ಕೈಗಾರಿಕೆಗಳನ್ನು ಮಾಡುವುದಕ್ಕೆ ಹೆಚ್ಚಾಗಿ ಅವಕಾಶ ಕೊಡುವುದಿಲ್ಲ.

ಶ್ರೀ ಎಸ್. ಎಸ್. ಅರಕೇರಿ.—ಕೇಂದ್ರ ಸರ್ಕಾರದಲ್ಲಿ ಕೃಷ್ಣ ಮೇನನ್‌ರವರು ಅಕ್ಷಣಾಮಂತ್ರಿಗಳಾಗಿ ದ್ದಾಗಸರ್ವೆ ಮಾಡಿಸಿದ್ದರು.ಚವಾಣ್‌ರವರು ರಕ್ಷಣಾಮಂತ್ರಿಗಳಾದಮೇಲೆ ಆ ಫ್ಯಾಕ್ಟರಿಯನ್ನು ನಾಸಿಕ್‌ಗೆ ತೆಗೆದುಕೊಂಡು ಹೋಗಿದ್ದಾರೆ. ಆ ಫ್ಯಾಕ್ಟರಿಯಲ್ಲಿ ೧೧ ಸಾವಿರ ಜನರಿಗೆ ನೌಕರಿ ಸಿಗುತ್ತಿತ್ತು. ನಮ್ಮ ಕರ್ನಾಟಕ ಸರ್ಕಾರದವರು ಏತಕ್ಕೆ ಒತ್ತಾಯ ಮಾಡಲಿಲ್ಲ ?

ಶ್ರೀ ಎಂ. ವೀರಪ್ಪ ಮೊಯಿಲಿ.—ಬಹುಶಃ ಇದು ಹಿಂದಿನ ಕಾಲದ ಕತೆ ಇರಬೇಕು. ಇತ್ತೀಚೆಗೆ ಇಂತಹ ಪ್ರಪೋಸಲ್ಸ್ ಇಲ್ಲ. ನಮ್ಮಲ್ಲಿದ್ದ ಮಾಹಿತಿ ಪ್ರಕಾರ ಈ ವಿಷಯ ಸರ್ಕಾರದ ಮುಂದೆ ಇಲ್ಲ.

ಶ್ರೀ ಎಸ್. ಎಸ್. ಅರಕೇರಿ—ಮಾಹಿತಿ ಇಲ್ಲದಿದ್ದರೆ ದಯಮಾಡಿ ತಾವಿಕೊಳ್ಳುತ್ತೀರಾ? ಬಿಜಾಪುರ ಜಿಲ್ಲೆ ಯಾವಾಗಲೂ ಬರಗಾಲಕ್ಕೆ ತುತ್ತಾಗುತ್ತಿರುತ್ತದೆ ಆದ್ದರಿಂದ ನಮ್ಮ ಕರ್ನಾಟಕ ಸರ್ಕಾರ ನಮ್ಮ ಬಿಜಾಪುರ ಜಿಲ್ಲೆ ಹಿಂದುಳಿದ ಪ್ರದೇಶವಾದ್ದರಿಂದ ಬಿ.ಇ ಎಲ್.. ಎಚ್.ಎ.ಎಲ್., ಮತ್ತು ಎಚ್.ಎಂ.ಟಿ. ಘಟಕಗಳನ್ನು ಸ್ಥಾಪನೆ ಮಾಡಿ ನಿರುದ್ಯೋಗ ಸಮಸ್ಯೆಯನ್ನು ಪರಿಹಾರ ಮಾಡಲು ಏನಾದರೂ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಂ. ವೀರಪ್ಪ ಮೊಯಿಲಿ.—ಬಿಜಾಪುರ ಜಿಲ್ಲೆ ಕೈಗಾರಿಕಾ ಕ್ಷೇತ್ರದಲ್ಲಿ ಹಿಂದುಳಿದ ಜಿಲ್ಲೆಯೆಂದು ಮನಗಂಡು ಬಿಜಾಪುರದ ೩ ತಾಲ್ಲೂಕುಗಳಾದ ಬಿಜಾಪುರ, ಬಾಗಲಕೋಟೆ ಮತ್ತು ಜಮಖಂಡಿ ತಾಲ್ಲೂಕು ಗಳನ್ನು ಹಿಂದುಳಿದ ತಾಲ್ಲೂಕುಗಳೆಂದು ವಿಂಗಡಿಸಿ ನಮ್ಮ ರಾಜ್ಯ ಸರ್ಕಾರ ಶೇಕಡ ೧೦ರಷ್ಟು ಹಣವನ್ನು ಸಬ್ಸಿಡಿ ಕೊಡಲಿಕ್ಕೆ ವಿಶೇಷವಾಗಿಟ್ಟಿದ್ದೇವೆ. ದೊಡ್ಡ ದೊಡ್ಡ ಕೈಗಾರಿಕೆಗಳು ಕೇಂದ್ರ ಸರ್ಕಾರದ ಪರವಾ ನಿಯಿಂದ ಬರುವ ಹಾಗಿದ್ದರೆ ಸರ್ಕಾರ ಖಂಡಿತವಾಗಿಯೂ ಪ್ರಯತ್ನ ಮಾಡುತ್ತದೆ

3-30 ಪಿ. ಎಂ.

ಶ್ರೀ ವಿ.ವಿ. ಪತ್ತಾರ್.—ಮಾನ್ಯ ಅಧ್ಯಕ್ಷರೇ, ಕೇವಲ ಹತ್ತು ಪರ್ಸೆಂಟ್ ಸಬ್‌ಸಿಡಿ ಕೊಡುವುದರಿಂದ ಬಿಜಾಪುರ ಜಿಲ್ಲೆಯಲ್ಲಿ ಕೈಗಾರಿಕೆಗಳು ಬರುವುದಕ್ಕೆ ಸಾಧ್ಯವಿಲ್ಲ. ಅಲ್ಲಿ ಸುಣ್ಣದ ಕಲ್ಲು ಬಹಳ ದೊಡ್ಡ ಪ್ರಮಾಣದಲ್ಲಿ ಇದೆ. ಅದನ್ನೆಲ್ಲಾ ರಿಸರ್ವ ಮಾಡಿದರೆ ಅನುಕೂಲವಾಗುತ್ತದೆ. ಇವತ್ತು ಎಂ ಎಂ.ಎಲ್. ಸಿಮೆಂಟ್ ಫ್ಯಾಕ್ಟರಿಯವರಿಗೆ ಲೀಸ್ ಮಾಡಿಕೊಟ್ಟಿದ್ದಾರೆ. ಇದನ್ನು ಸ್ವಲ್ಪ ಮುಕ್ತ ಪಡಿಸಿದರೆ ಲೈಮ್ ಓರಿಯನೆಟೆಡ್ ಅನುಕೂಲವಾಗುತ್ತತ್ತದೆ.

ಅಧ್ಯಕ್ಷರು. —ಯಾವ ಪ್ರಶ್ನೆ ಹಾಕುತ್ತಿದ್ದೀರಿ ?

ಶ್ರೀ ವಿ.ವಿ. ಪತ್ತಾರ್.—ಕೈಗಾರಿಕೆಗಳಿಗೆ ಸಂಬಂಧಪಟ್ಟ ಪ್ರಶ್ನೆ.

ಅಧ್ಯಕ್ಷರು.—ದಯಮಾಡಿ ತಾವು ಕೂತುಕೊಳ್ಳಿ.

ಶ್ರೀ ಎಸ್.ಎಸ್. ಅರಕೇರಿ.—ಜಮಖಂಡಿ, ಬಿಜಾಪುರ ಹಾಗೂ ಬಾಗಲಕೋಟೆ ತಾಲ್ಲೂಕುಗಳು ಹಿಂದುಳಿದ ತಾಲ್ಲೂಕುಗಳೆಂದು ಉತ್ತರ ಕೊಟ್ಟಿದ್ದೀರಿ. ಬಿಜಾಪುರ ತಾಲ್ಲೂಕು, ಇಂಡಿ ಮತ್ತು ಸಿಂದಿಗಿ ಹಾಗೂ ಬೀಳಗಿ ತಾಲ್ಲೂಕುಗಳ ಔದ್ಯೋಗಿಕ ದೃಷ್ಟಿಯಿಂದ ಹಿಂದುಳಿದಿರುವುದರಿಂದ ಇವುಗಳನ್ನು ಪರಿಶೀಲನೆ ಮಾಡುತ್ತೀರಾ ?

ಶ್ರೀ ಎಂ. ವೀರಪ್ಪ ಮೊಯ್ಲಿ.—ಕೆಲವು ತಾಲ್ಲೂಕುಗಳನ್ನು ಹಿಂದುಳಿದ ತಾಲ್ಲೂಕುಗಳೆಂದು ಎಂಗಡಿ ಸುವುದಕ್ಕೆ ಅವುಗಳು ಕೈಗಾರಿಕೆಯಲ್ಲಿ ಹಿಂದುಳಿದಿರಬೇಕು. ಮತ್ತೆ ಕೈಗಾರಿಕೆಗಳು ಬರುವುದಕ್ಕೆ ಸಾಧ್ಯತೆ ಇರಬೇಕು. ಬಿಜಾಪುರ ತಾಲ್ಲೂಕಿನಲ್ಲಿ ೧೦ ಪರ್ಸೆಂಟ್ ಸಬ್‌ಸಿಡಿ ಬಿಟ್ಟರೂ ಕೈಗಾರಿಕೆಗಳು ಬರುವುದಕ್ಕೆ

ಸಾಧ್ಯವಿಲ್ಲ ಅಂದರೆ, ೧೦ ತಾಲ್ಲೂಕುಗಳಲ್ಲಿ ಮಾಡಿದರೂ ಕೈಗಾರಿಕೆಗಳು ಬರುವುದಕ್ಕೆ ಸಾಧ್ಯವಿಲ್ಲ. ಎಲ್ಲಿ ಕೈಗಾರಿಕೆಗಳು ಬರುವುದಕ್ಕೆ ಸಾಧ್ಯ ಇದೆ, ಅಂಥ ಭಾಗಗಳಲ್ಲಿ ಪ್ರಚೋದನೆ ಕೊಟ್ಟು ಕೈಗಾರಿಕೆಗಳು ಬರುವಂತೆ ಮಾಡಬೇಕು. ಇದರಲ್ಲಿ ವಿಸ್ತರಣೆ ಮಾಡುವಂತ ಪ್ರಶ್ನೆ ಇಲ್ಲ.

ಅಧ್ಯಕ್ಷರು.—ಪ್ರಶ್ನೋತ್ತರ ವೇಳೆ ಮುಗಿಯಿತು.

QUESTIONS FOR ANSWERS ON THE DAY
(but not taken up)

Cultivation of Land in S. No. 47, Kalinganahalli Village, Gubbi Taluk.

44. SRI T. B. JAYACHANDRA (Kallambella).—Will the Minister for Revenue be pleased to state,—

(a) whether it is a fact, the Government land has been released from forest for cultivation in S. No. 47 of Kalinganahalli Village, Hagalawadi Hobli Gubbi Taluk, which is behind the Gandikere Project.

(b) if so, whether the land was granted to them, if not the reason for the delay ;

(c) the action taken by Government for granting lands early ?

SRI MALLIKARJUNA M. KHARGE (Minister for Revenue).—

(a) Yes.

(b) 24 acres of land has been granted and the remaining land in this Sy. No. is also being granted.

(c) In view of reply to (b), this does not arise.

Appointment of High Power Commission to eradicate famine

83. SRI S. S. ARAKERI (Balloli).—Will the Minister for Revenue be pleased to state

(a) whether the Government has decided to appoint High Power Commission to find out the permanent (remedies) ways and means to eradicate the famine of Baijpur district ;

(b) if so, the names of the members of each High Power Commission both officials and non-officials including the Chairman ;

(c) terms of reference and the period required for the Commission to work and submit its report to Government ?